# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **363** |
| **02. ಮಾನ್ಯ ಸದಸ್ಯರ ಹೆಸರು** | : | ಶ್ರೀಮತಿ ಉಮಾಶ್ರೀ (ನಾಮ ನಿರ್ದೇಶನ ಹೊಂದಿದವರು) |
| **03. ಉತ್ತರಿಸುವ ದಿನಾಂಕ** | : | **23.02.2024** |
| **04. ಉತ್ತರಿಸುವ ಸಚಿವರು** | : | ಗೃಹ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ದಾಖಲಾದ ಅಕ್ರಮ ಮಕ್ಕಳ ಮಾರಾಟದ ಪ್ರಕರಣಗಳು ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) ಇವುಗಳಲ್ಲಿ ಎಷ್ಟು ಪ್ರಕರಣಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ; ಪ್ರಕರಣಗಳ ತನಿಖೆಯಾವ ಹಂತದಲ್ಲಿದೆ;</td><td>ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ದಾಖಲಾದ ಅಕ್ರಮ ಮಕ್ಕಳ ಮಾರಾಟದ ಪ್ರಕರಣಗಳು ಸಂಖ್ಯೆ ಈ ಕೆಳಕಂಡಂತಿದೆ.<br><br>
<table>
<tr><th>ವರ್ಷ</th><th>ವರದಿ</th><th>ಪತ್ತೆ</th><th>ಪತ್ತೆಗೆ ಬಾಕಿ</th></tr>
<tr><td>2021</td><td>20</td><td>19</td><td>1</td></tr>
<tr><td>2022</td><td>9</td><td>12</td><td>3</td></tr>
<tr><td>2023</td><td>6</td><td>5</td><td>1</td></tr>
</table>
<br>ಜಿಲ್ಲಾವಾರು ಮಾಹಿತಿಯನ್ನು ಅನುಬಂಧ–1 ರಲ್ಲಿ ಒದಗಿಸಲಾಗಿದೆ.</td></tr>
<tr><td>ಆ)</td><td>ಇತ್ತೀಚೆಗೆ ಬೆಂಗಳೂರಿನಲ್ಲಿ ಅಕ್ರಮ ಮಕ್ಕಳ ಮಾರಾಟ ಪ್ರಕರಣಗಳು ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;</td><td>ಬೆಂಗಳೂರಿನಲ್ಲಿ ಅಕ್ರಮ ಮಕ್ಕಳ ಮಾರಾಟ ಕುರಿತಂತೆ 5 ಪ್ರಕರಣಗಳು ವರದಿಯಾಗಿದ್ದು, ಸದರಿ ಪ್ರಕರಣಗಳ ಪ್ರಕರಣಾವಾರು ಮಾಹಿತಿಯನ್ನು ಅನುಬಂಧ–2 ರಲ್ಲಿ ಒದಗಿಸಲಾಗಿದೆ.<br><u>ಇಂತಹ ಪ್ರಕರಣಗಳಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮಗಳ ವಿವರಗಳು.</u><br>• ಅಪಹರಣ ಪ್ರಕರಣ ವರದಿಯಾದ ಕೂಡಲೇ ರಾಜ್ಯದ ಎಲ್ಲಾ ಠಾಣೆಗಳಿಗೆ ಪ್ರಕರಣದ ಆರೋಪಿ ಮತ್ತು ಅಪಹರಿಸಿರುವ ಮಗುವಿನ ಬಗ್ಗೆ, ಯಾವುದೇ ಸುಳಿವು ದೊರೆತಲ್ಲಿ, ಪೋಷಕರ ಒಪ್ಪಿಗೆ ಮೇರೆಗೆ ಮಾಹಿತಿ ಪಡೆದುಕೊಳ್ಳಲು ಪತ್ರಿಕಾ ಪ್ರಕಟಣೆ, ದೂರದರ್ಶನ, ಆಕಾಶವಾಣಿ ಇತ್ಯಾದಿ ಮಾದ್ಯಮಗಳಲ್ಲಿ ಪ್ರಕಟಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>• ರಾಜ್ಯದ ಗಡಿ ಪ್ರದೇಶಗಳಲ್ಲಿ ಮತ್ತು ಬಸ್ ನಿಲ್ದಾಣ/ರೈಲ್ವೆ ನಿಲ್ದಾಣಗಳಲ್ಲಿ ಭಿತ್ತಿ ಪತ್ರಗಳನ್ನು/ಫೋಟೋಗಳನ್ನು ಅಂಟಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.<br>• ರಿಜನಲ್ ಪಾಸ್‌ಪೋರ್ಟ್ ಆಫೀಸ್‌ನಲ್ಲಿ ಯಾರಾದರೂ</td></tr>
</table>

| | | |
|---|---|---|
| | | ನವಜಾತ ಮಕ್ಕಳಿಗೆ ಪಾಸ್‌ಪೋರ್ಟ್‌ಗಾಗಿ ಅರ್ಜಿ ಸಲ್ಲಿಸಿರುವರೇ ಎಂಬ ಬಗ್ಗೆ ಪರಿಶೀಲನೆ ಮಾಡಲಾಗುತ್ತಿದೆ.<br>• ಲುಕ್‌ಔಟ್ ನೋಟೀಸ್ ನೀಡುವುದು, ಅಕ್ಕ-ಪಕ್ಕದ ಜಿಲ್ಲೆಗಳಲ್ಲಿ ಕಾಣೆಯಾದ ಮಕ್ಕಳ ಕುರಿತು ಹುಡುಕಾಟ ನಡೆಸುವುದು.<br>• ದಕ್ಷ ಅಧಿಕಾರಿಗಳ ತಂಡವನ್ನು ನಿರ್ಮಿಸಿ ಎಲ್ಲಾ ಕಡೆಗಳಲ್ಲಿ ಹುಡುಕಾಟ ನಡೆಸುವುದು, ಅಕ್ಕ-ಪಕ್ಕದ ಜಿಲ್ಲೆಗಳ ಪೊಲೀಸ್ ಠಾಣೆಗಳಲ್ಲಿ ದಾಖಲಾದ ಅಪರಿಚಿತ ಶವಗಳ UDR ಪ್ರಕರಣಗಳನ್ನು ಪರಿಶೀಲಿಸುವುದು, ಜಿಲ್ಲಾ ಅಪರಾಧ ದಾಖಲಾತಿ ವಿಭಾಗಗಳಲ್ಲಿನ ವರದಿಗಳನ್ನು ಪರಿಶೀಲಿಸುವುದು, ದಿನಪತ್ರಿಕೆ ಹಾಗೂ ಇತರೆ ಮಾಧ್ಯಮಗಳಲ್ಲಿ ಕಾಣೆಯಾದ ಮಕ್ಕಳ ಭಾವಚಿತ್ರವನ್ನು ಪ್ರಸಾರ ಮಾಡುವುದು.<br>• ಪ್ರತಿ ಮಾನವ ಕಳ್ಳಸಾಗಾಣಿಕೆ ತಡೆ ಘಟಕಗಳಿಗೆ ಹಿರಿಯ ಮತ್ತು ಕಿರಿಯ ಮಕ್ಕಳ ಕಲ್ಯಾಣಾಧಿಕಾರಿಗಳನ್ನು ನಿಯೋಜಿಸಿ, ಅವರುಗಳಿಗೆ ತರಬೇತಿ ನೀಡಲಾಗಿರುತ್ತದೆ.<br>• ಮಾನವ ಸಾಗಾಣಿಕೆ ಮಾಡುವವರ ವಿರುದ್ಧ ಬಾತ್ಮಿ ಸಂಗ್ರಹಿಸಿ ತಪ್ಪಿತಸ್ಥರ ವಿರುದ್ಧ ಕಲಂ.370, 370[ಎ] ಐಪಿಸಿ ಮತ್ತು ಇಮ್ಮಾರಲ್ ಟ್ರಾಫಿಕಿಂಗ್ ಪ್ರಿವೆನ್ಷನ್ ಆಕ್ಟ್ (ಐ.ಟಿ.ಪಿ.ಎ) ಹಾಗೂ ಸಂಬಂಧಪಟ್ಟ ಇತರೆ ಕಾಯ್ದೆ ರೀತ್ಯಾ ಪ್ರಕರಣಗಳನ್ನು ದಾಖಲಿಸಿ, ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುತ್ತಿದೆ.<br>• ಮಾನವ ಕಳ್ಳಸಾಗಾಣಿಕೆಯ ಪ್ರಕರಣಗಳ ತನಿಖೆಯನ್ನು ಸಮರ್ಥವಾಗಿ ನಿರ್ವಹಿಸಲು ತನಿಖಾಧಿಕಾರಿಗಳಿಗಾಗಿ ನಿರ್ದಿಷ್ಟ ಕಾರ್ಯವಿಧಾನವನ್ನು ಸಿದ್ಧಪಡಿಸಿ, ಸ್ಥಾಯಿ ಆದೇಶದ ಮೂಲಕ ರಾಜ್ಯದ ಎಲ್ಲಾ ಘಟಕಾಧಿಕಾರಿಗಳಿಗೆ ಕಳುಹಿಸಿಕೊಡಲಾಗಿದೆ.<br>• ಅಪರಿಚಿತ ವ್ಯಕ್ತಿಗಳ ಬಳಿ ಸಂಪರ್ಕ ಇಟ್ಟುಕೊಳ್ಳದಂತೆ, ಆಸೆ ಆಮಿಷಗಳನ್ನು ಒಡ್ಡುವ ಆಸಾಮಿಗಳ ಬಗ್ಗೆ ಮಹಿಳೆಯರಿಗೆ & ಮಕ್ಕಳಿಗೆ ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸೂಕ್ತ ತಿಳುವಳಿಕೆಗಳನ್ನು ನೀಡಲಾಗಿರುತ್ತದೆ.<br>• ಅಪರಾಧ ಚಟುವಟಿಕೆಗಳಲ್ಲಿ ಹಾಗೂ ಮಕ್ಕಳನ್ನು ಭಿಕ್ಷಾಟನೆಯಲ್ಲಿ ತೊಡಗಿಸಿರುವಂತಹ ಅಪರಿಚಿತ ವ್ಯಕ್ತಿಗಳು ಕಂಡು ಬಂದಲ್ಲಿ, ಹತ್ತಿರದ ಠಾಣೆಗೆ ಮಾಹಿತಿ ನೀಡುವಂತೆ ಸೂಚಿಸಲಾಗಿರುತ್ತದೆ. |

| | | |
|---|---|---|
| | | • ಮಹಿಳೆ ಮತ್ತು ಮಕ್ಕಳ ಸುರಕ್ಷತೆಗಾಗಿ ವಿವಿಧ ಹೆಸರುಗಳಡಿಯಲ್ಲಿ ವಿಶೇಷ ಪಡೆಗಳನ್ನು ರಚಿಸಿದ್ದು, ಸದರಿ ಪಡೆಯು ನಗರದ ಮತ್ತು ಜಿಲ್ಲಾ ವ್ಯಾಪ್ತಿಯ ಶಾಲಾ-ಕಾಲೇಜು, ಪಾರ್ಕ್‌ಗಳು, ಹಾಸ್ಟೆಲ್, ಪಿಜಿ, ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ ಮತ್ತು ಹೆಚ್ಚಾಗಿ ಮಹಿಳೆಯರು ಮತ್ತು ಮಕ್ಕಳು ಓಡಾಡುವ ಇತರೆ ಸ್ಥಳಗಳಲ್ಲಿ ಪ್ರತಿದಿನ ಗಸ್ತು ಕರ್ತವ್ಯ ನಿರ್ವಹಿಸುತ್ತಾರೆ.<br>• ಬಸ್ ನಿಲ್ದಾಣ, ರೈಲು ನಿಲ್ದಾಣ, ವಿಮಾಣ ನಿಲ್ದಾಣ ಮತ್ತು ಜನನಿಬಿಡ ಸ್ಥಳಗಳಲ್ಲಿ ಹಾಗೂ ಪ್ರಮುಖ ಸ್ಥಳಗಳನ್ನು ಗುರುತಿಸಿ ಸಿಸಿ ಟಿ.ವಿ ಕ್ಯಾಮರಾಗಳನ್ನು ಅಳವಡಿಸಿದ್ದು ಅವುಗಳ ಸಹಾಯದಿಂದ ಮಹಿಳೆಯರ ಮತ್ತು ಮಕ್ಕಳ ಸಾಗಾಟ ಮಾಡುವವರ ಮೇಲೆ ನಿಗಾವಹಿಸಲಾಗಿದೆ.<br>• ಕೃತ್ಯ ನಡೆದ ಸ್ಥಳದಲ್ಲಿ ಹಾಗೂ ಸುತ್ತಮುತ್ತಲೂ ಲಭ್ಯವಿರುವ ಸಿಸಿಟಿವಿ ಕ್ಯಾಮರಾದ ಫೂಟೇಜ್‌ಗಳನ್ನು ಪರಿಶೀಲನೆ ಮಾಡಲಾಗುತ್ತದೆ.<br>• ಲಭ್ಯವಿರುವ ಮಾಹಿತಿಯೊಂದಿಗೆ (ಚಹರೆ) ಟ್ರಾಕ್ ಚೈಲ್ಡ್ ತಂತ್ರಾಂಶದಲ್ಲಿ ಮಗುವಿನ ದೈಹಿಕ ಚಹರೆಯನ್ನು ಮಿಸ್ಸಿಂಗ್ ಪರ್ಸನ್ಸ್ ಬ್ಯೂರೋಗೆ ಕಳುಹಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.<br>• ಮಾನವ ಕಳ್ಳಸಾಗಾಣಿಕೆ ಪ್ರಕರಣಗಳನ್ನು ತಡೆಗಟ್ಟಲು ಮಾನವ ಕಳ್ಳಸಾಗಾಣಿಕೆ ನಿಷೇಧ ಘಟಕ ಹಾಗೂ ಸಂಬಂಧಪಟ್ಟ ಎಸ್‌ಸಿಆರ್‌ಬಿ (ರಾಜ್ಯ ಅಪರಾಧ ದಾಖಲಾತಿ ಘಟಕ) ಮತ್ತು ಎನ್‌ಸಿಆರ್‌ಬಿ (ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ) ಪೊಲೀಸ್ ಅಧಿಕಾರಿಗಳನ್ನು ಸಂಪರ್ಕಿಸಿ, ಮಾನವ ಕಳ್ಳಸಾಗಾಣಿಕೆ ಅಪರಾಧಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತಿದೆ.<br>• ಅಪಹರಣಕ್ಕೊಳಗಾದ ಮಗುವಿನ ಭಾವಚಿತ್ರಗಳ ನೋಟೀಸುಗಳನ್ನು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅಂಟಿಸುವ ಮೂಲಕ, ಸಾಮಾಜಿಕ ಜಾಲತಾಣಗಳಲ್ಲಿ, ಎಲ್ಲಾ ವರ್ಗದ ಜನತೆಯನ್ನೂ ತಲುಪುವಂತೆ ವ್ಯಾಪಕ ಪ್ರಚಾರ ನೀಡಿ ಸಾರ್ವಜನಿಕರ ಸಹಕಾರದಿಂದ ಈ ಪ್ರಕರಣದಲ್ಲಿ ಅಪಹರಣಕ್ಕೊಳಗಾದ ಮಗು ಮತ್ತು ಆರೋಪಿಯನ್ನು ಪತ್ತೆ ಮಾಡಲಾಗುತ್ತದೆ.<br>• ಶಾಪಿಂಗ್ ಮಾಲ್‌ಗಳು, ಉದ್ಯಾನವನಗಳು, ಮನರಂಜನಾ ಸ್ಥಳಗಳು, ಕ್ರೀಡಾ ಸ್ಥಳಗಳು, ಮತ್ತು ಅಪಹರಣಕ್ಕೊಳಗಾದ ಮಕ್ಕಳು ಸಾಮಾನ್ಯವಾಗಿ ಇರಬಹುದಾದ ಸ್ಥಳಗಳಲ್ಲಿ ಶೋಧನೆ ಮಾಡಿ ಅಪಹರಣಕ್ಕೊಳಗಾದ ಮಗುವನ್ನು |

| | | |
|---|---|---|
| | | ಮತ್ತು ಆರೋಪಿಯನ್ನು ಪತ್ತೆ ಮಾಡಲಾಗುವುದು.<br>• ಸರ್ಕಾರೇತರ ಎನ್.ಜಿ.ಓ ಗಳ ಸಹಕಾರದೊಂದಿಗೆ ಕಾಣೆಯಾದ ಮಕ್ಕಳ ಪತ್ತೆಗಾಗಿ ಶ್ರಮಿಸಲಾಗುತ್ತಿದೆ.<br>• ನಿರ್ಮಾಣದ ಹಂತದಲ್ಲಿರುವಂತಹ ಕಟ್ಟಡಗಳು, ಬಳಕೆಯಾಗದಂತಹ ಕಟ್ಟಡಗಳು, ಆಸ್ಪತ್ರೆಗಳು ಮತ್ತು ಔಷಧಾಲಯಗಳು, ರೈಲ್ವೆ ಪೊಲೀಸರು ಮತ್ತಿತರ ಸ್ಥಳಗಳಲ್ಲಿ ವಿಚಾರಣೆ ನಡೆಸಿ ಅವರಿಂದ ಮಾಹಿತಿಯನ್ನು ಸಂಗ್ರಹಿಸಿ ಅಪಹರಣಕ್ಕೊಳಗಾದ ಮಗುವನ್ನು ಮತ್ತು ಆರೋಪಿಯನ್ನು ಪತ್ತೆ ಮಾಡಲಾಗುವುದು.<br>• ಕಾಣೆಯಾದ ಪ್ರಕರಣಗಳ ಪೈಕಿ 60 ದಿನದೊಳಗೆ ಪತ್ತೆಯಾಗದ ಪ್ರಕರಣಗಳನ್ನು ಪರಿಣಾಮಕಾರಿ ತನಿಖೆಗಾಗಿ ವಿಶೇಷ ಘಟಕವಾದ ಎಹೆಚ್‌ಟಿಯು (Anti Human Trafficking Unit) ಘಟಕಗಳಿಗೆ ವರ್ಗಾವಣೆ ಮಾಡುವುದು.<br>• ಅನಾಥಾಶ್ರಮಗಳಲ್ಲಿ, ಆಶ್ರಮಗಳಲ್ಲಿ, ಆಧ್ಯಾತ್ಮಿಕ ಸ್ಥಳಗಳಲ್ಲಿ ಮತ್ತು ಬಾಲಮಂದಿರಗಳಲ್ಲಿ ಹುಡುಕುವುದು. ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿನ ಬೀಟ್ ಸಿಬ್ಬಂದಿಗಳ ಮೂಲಕ ಹಾಗೂ ಬೀಟ್ ಗ್ರೂಪ್ ಸದಸ್ಯರ ಮೂಲಕ ಮಾನವ ಕಳ್ಳಸಾಗಾಣಿಕೆ ಬಗ್ಗೆ ಸಂಬಂಧಿಸಿದಂತೆ ಮುಂಚಿತವಾಗಿ ಮಾಹಿತಿ ಸಂಗ್ರಹಿಸಿ ಸೂಕ್ತ ಮುಂಜಾಗ್ರತಾ ಕ್ರಮ ಕೈಗೊಳ್ಳುವ ವ್ಯವಸ್ಥೆ ಮಾಡಲಾಗಿದೆ. |
| ಇ) | ಇಂತಹ ಪ್ರಕರಣಗಳಲ್ಲಿ ಆಸ್ಪತ್ರೆಯ ವೈದ್ಯರು ಮತ್ತು ಸಿಬ್ಬಂದಿಗಳೆ ನೇರವಾಗಿ ಶಾಮೀಲಾಗುತ್ತಿರುವುದು ಕಂಡು ಬಂದಿದ್ದು, ಇವರ ವಿರುದ್ದ ಎಷ್ಟು ಪ್ರಕರಣಗಳು ದಾಖಲಾಗಿವೆ; ಹಾಗೂ ಇವರ ವಿರುದ್ದ ಸರ್ಕಾರ ಕ್ರಮಗಳನ್ನು ಕೈಗೊಂಡಿದೆ? | ಆಸ್ಪತ್ರೆಯ ಸಿಬ್ಬಂದಿ ಮಗು ಮಾರಾಟದಲ್ಲಿ ಶಾಮೀಲಾಗಿರುವ ಕುರಿತು ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಂದು ಪ್ರಕರಣ ವರದಿಯಾಗಿರುತ್ತದೆ.<br>ಆಸ್ಪತ್ರೆಯ ವೈದ್ಯರು ಮತ್ತು ಸಿಬ್ಬಂದಿಗಳು ಶಾಮೀಲಾಗುತ್ತಿರುವುದು ಕುರಿತು ದೂರುಗಳು ಬಂದಲ್ಲಿ, ಅಂತಹವರ ವಿರುದ್ಧ ಕಾನೂನು ಕಾಯ್ದೆಗಳನ್ವಯ ಪ್ರಕರಣ ದಾಖಲಿಸಿಕೊಂಡು ಕಾನೂನು ಕ್ರಮ ಕೈಗೊಳ್ಳಲಾಗುವುದು. |

HD 17 PCQ 2024

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು

# ಅನುಬಂಧ-1

| ಕ್ರ.ಸಂ | ಘಟಕ | 2021 | | | 2022 | | | 2023 | | |
|---|---|---|---|---|---|---|---|---|---|---|
| | | ದಾಖಲಾದ ಪ್ರಕರಣಗಳ ಸಂಖ್ಯೆ | ಪತ್ತೆ ಹಚ್ಚಲಾದ ಪ್ರಕರಣಗಳ ಸಂಖ್ಯೆ | ಬಾಕಿ ಇರುವ ಪ್ರಕರಣಗಳ ಸಂಖ್ಯೆ | ದಾಖಲಾದ ಪ್ರಕರಣಗಳ ಸಂಖ್ಯೆ | ಪತ್ತೆ ಹಚ್ಚಲಾದ ಪ್ರಕರಣಗಳ ಸಂಖ್ಯೆ | ಬಾಕಿ ಇರುವ ಪ್ರಕರಣಗಳ ಸಂಖ್ಯೆ | ದಾಖಲಾದ ಪ್ರಕರಣಗಳ ಸಂಖ್ಯೆ | ಪತ್ತೆ ಹಚ್ಚಲಾದ ಪ್ರಕರಣಗಳ ಸಂಖ್ಯೆ | ಬಾಕಿ ಇರುವ ಪ್ರಕರಣಗಳ ಸಂಖ್ಯೆ |
| 1 | ಬಾಗಲಕೋಟೆ ಜಿಲ್ಲೆ | 0 | 0 | 0 | 1 | 1 | 0 | 1 | 1 | 0 |
| 2 | ಬಳ್ಳಾರಿ ಜಿಲ್ಲೆ | 0 | 0 | 0 | 0 | 0 | 0 | 0 | 0 | 0 |
| 3 | ಬೆಳಗಾವಿ ನಗರ | 0 | 0 | 0 | 0 | 0 | 0 | 0 | 0 | 0 |
| 4 | ಬೆಳಗಾವಿ ಜಿಲ್ಲೆ | 1 | 1 | 0 | 0 | 0 | 0 | 0 | 0 | 0 |
| 5 | ಬೆಂಗಳೂರು ನಗರ | 3 | 3 | 0 | 1 | 1 | 0 | 1 | 1 | 0 |
| 6 | ಬೆಂಗಳೂರು ಜಿಲ್ಲೆ | 1 | 0 | 1 | 1 | 1 | 0 | 1 | 0 | 1 |
| 7 | ಬೀದರ್ ಜಿಲ್ಲೆ | 0 | 0 | 0 | 0 | 0 | 0 | 0 | 0 | 0 |
| 8 | ಚಾಮರಾಜನಗರ ಜಿಲ್ಲೆ | 0 | 0 | 0 | 1 | 1 | 0 | 0 | 0 | 0 |
| 9 | ಚಿಕ್ಕಬಳ್ಳಾಪುರ ಜಿಲ್ಲೆ | 1 | 1 | 0 | 0 | 0 | 0 | 0 | 0 | 0 |
| 10 | ಚಿಕ್ಕಮಗಳೂರು ಜಿಲ್ಲೆ | 3 | 3 | 0 | 0 | 0 | 0 | 1 | 1 | 0 |
| 11 | ಚಿತ್ರದುರ್ಗ ಜಿಲ್ಲೆ | 1 | 1 | 0 | 0 | 0 | 0 | 0 | 0 | 0 |
| 12 | ದಕ್ಷಿಣ ಕನ್ನಡ ಜಿಲ್ಲೆ | 0 | 0 | 0 | 0 | 0 | 0 | 0 | 0 | 0 |
| 13 | ದಾವಣಗೆರೆ ಜಿಲ್ಲೆ | 1 | 1 | 0 | 0 | 3 | 3 | 0 | 0 | 0 |
| 14 | ಧಾರವಾಡ ಜಿಲ್ಲೆ | 0 | 0 | 0 | 0 | 0 | 0 | 0 | 0 | 0 |
| 15 | ಗದಗ ಜಿಲ್ಲೆ | 0 | 0 | 0 | 0 | 0 | 0 | 0 | 0 | 0 |
| 16 | ಹಾಸನ ಜಿಲ್ಲೆ | 0 | 0 | 0 | 2 | 2 | 0 | 0 | 0 | 0 |
| 17 | ಹಾವೇರಿ ಜಿಲ್ಲೆ | 0 | 0 | 0 | 0 | 0 | 0 | 0 | 0 | 0 |
| 18 | ಹುಬ್ಬಳ್ಳಿ-ಧಾರವಾಡ ನಗರ | 0 | 0 | 0 | 0 | 0 | 0 | 1 | 1 | 0 |
| 19 | ಕೆ.ಜಿ.ಎಫ್ | 1 | 1 | 0 | 0 | 0 | 0 | 0 | 0 | 0 |
| 20 | ಕಲಬುರಗಿ ನಗರ | 0 | 0 | 0 | 0 | 0 | 0 | 0 | 0 | 0 |
| 21 | ಕಲಬುರಗಿ ಜಿಲ್ಲೆ | 0 | 0 | 0 | 0 | 0 | 0 | 0 | 0 | 0 |
| 22 | ಕರ್ನಾಟಕ ರೈಲ್ವೆಸ್ | 0 | 0 | 0 | 0 | 0 | 0 | 0 | 0 | 0 |
| 23 | ಕೊಡಗು ಮಡಿಕೇರಿ | 0 | 0 | 0 | 0 | 0 | 0 | 0 | 0 | 0 |
| 24 | ಕೋಲಾರ ಜಿಲ್ಲೆ | 0 | 0 | 0 | 0 | 0 | 0 | 0 | 0 | 0 |
| 25 | ಕೊಪ್ಪಳ ಜಿಲ್ಲೆ | 0 | 0 | 0 | 0 | 0 | 0 | 0 | 0 | 0 |
| 26 | ಮಂಡ್ಯ ಜಿಲ್ಲೆ | 0 | 0 | 0 | 0 | 0 | 0 | 0 | 0 | 0 |
| 27 | ಮಂಗಳೂರು ನಗರ | 2 | 2 | 0 | 0 | 0 | 0 | 0 | 0 | 0 |
| 28 | ಮೈಸೂರು ನಗರ | 0 | 0 | 0 | 0 | 0 | 0 | 0 | 0 | 0 |
| 29 | ಮೈಸೂರು ಜಿಲ್ಲೆ | 2 | 2 | 0 | 1 | 1 | 0 | 1 | 1 | 0 |
| 30 | ರಾಯಚೂರು ಜಿಲ್ಲೆ | 0 | 0 | 0 | 1 | 1 | 0 | 0 | 0 | 0 |
| 31 | ರಾಮನಗರ ಜಿಲ್ಲೆ | 0 | 0 | 0 | 0 | 0 | 0 | 0 | 0 | 0 |
| 32 | ಶಿವಮೊಗ್ಗ ಜಿಲ್ಲೆ | 2 | 2 | 0 | 0 | 0 | 0 | 0 | 0 | 0 |
| 33 | ತುಮಕೂರು ಜಿಲ್ಲೆ | 0 | 0 | 0 | 0 | 0 | 0 | 0 | 0 | 0 |
| 34 | ಉಡುಪಿ ಜಿಲ್ಲೆ | 1 | 1 | 0 | 0 | 0 | 0 | 0 | 0 | 0 |
| 35 | ಉತ್ತರ ಕನ್ನಡ ಕಾರವಾರ | 0 | 0 | 0 | 0 | 0 | 0 | 0 | 0 | 0 |
| 36 | ವಿಜಯನಗರ ಜಿಲ್ಲೆ | 0 | 0 | 0 | 0 | 0 | 0 | 0 | 0 | 0 |
| 37 | ವಿಜಯಪುರ ಜಿಲ್ಲೆ | 1 | 1 | 0 | 1 | 1 | 0 | 0 | 0 | 0 |
| 38 | ಯಾದಗಿರಿ ಜಿಲ್ಲೆ | 0 | 0 | 0 | 0 | 0 | 0 | 0 | 0 | 0 |
| | ಒಟ್ಟು | 20 | 19 | 1 | 9 | 12 | 3 | 6 | 5 | 1 |

ಅನುಬಂಧ–2

ಬೆಂಗಳೂರು ನಗರದಲ್ಲಿ ಕಳೆದ 3 ವರ್ಷಗಳಲ್ಲಿ ವರದಿಯಾಗಿರುವ ಅಕ್ರಮ ಮಕ್ಕಳ ಮಾರಾಟದ ಪ್ರಕರಣಗಳು

| ವರ್ಷ | ದಾಖಲಾದ ಪ್ರಕರಣಗಳ ಸಂಖ್ಯೆ | ಪತ್ತೆ ಹಚ್ಚಲಾದ ಪ್ರಕರಣಗಳ ಸಂಖ್ಯೆ | ಬಾಕಿ ಇರುವ ಪ್ರಕರಣಗಳ ಸಂಖ್ಯೆ | ಬಾಕಿ ಇರುವ ಪ್ರಕರಣಗಳ ಸಂಖ್ಯೆ ಯಾವ ಹಂತದಲ್ಲಿದೆ. |
|---|---|---|---|---|
| 2021 | 3 | 3 | – | ವಿಲ್ಸನ್‌ಗಾರ್ಡನ್ ಪೊಲೀಸ್ ಠಾಣೆ 161/2021 ಕಲಂ 81 ಜೆ.ಜೆ ಆಕ್ಟ್, 370(4), 370(2), 34, 120(ಬಿ), 370 ಐಪಿಸಿ ಪ್ರಕರಣದಲ್ಲಿ 1 ತಿಂಗಳ ಮಗುವನ್ನು ಪತ್ತೆ ಮಾಡಲಾಗಿರುತ್ತದೆ. ಆರೋಪಿಗಳ ವಿರುದ್ದ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದು, ಪ್ರಕರಣವು SPL CC 2027/2022 ರಂತೆ ವಿಚಾರಣೆ ನಡೆದು ದಿನಾಂಕ:13.04.2023 ರಂದು ಖುಲಾಸೆಯಾಗಿರುತ್ತದೆ.<br>ಆರ್.ಟಿ.ನಗರ ಠಾಣಾ 227/2021 ಕಲಂ 81 ಜೆಜೆ ಆಕ್ಟ್ ರೀತ್ಯ ಪ್ರಕರಣ ದಾಖಲು ಮಾಡಿಕೊಂಡು ಮಗುವನ್ನು ಪತ್ತೆ ಮಾಡಲಾಗಿರುತ್ತದೆ. ಮಾನ್ಯ 32ನೇ ಎಸಿಎಂಎಂ ನ್ಯಾಯಾಲಯದಲ್ಲಿ ಸಿಸಿ ನಂ– 10422/2022 ರಲ್ಲಿ ವಿಚಾರಣೆಯರುತ್ತದೆ ಹಾಗೂ ಮುಂದಿನ ವಿಚಾರಣಾ ದಿನಾಂಕ:23.03.2024 ಆಗಿರುತ್ತದೆ.<br>ಬಸವನಗುಡಿ ಮಹಿಳಾ ಪೊಲೀಸ್ ಠಾಣೆ ಮೊಸಂ–67/2021 ಕಲಂ 67 ಆಫ್ ಜೆಜೆ ಆಕ್ಟ್, ಮತ್ತು 370 ಐಪಿಸಿ ರೀತ್ಯ ಪ್ರಕರಣ ದಾಖಲಾಗಿದ್ದು, ಮಗುವನ್ನು ಪತ್ತೆ ಮಾಡಲಾಗಿರುತ್ತದೆ. ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದು, ಸಿಸಿಹೆಚ್ ನಂ–914/2021 ರಂತೆ ವಿಚಾರಣೆಯಲ್ಲಿರುತ್ತದೆ ಹಾಗೂ ಮುಂದಿನ ವಿಚಾರಣೆ ದಿನಾಂಕ:01.03.2024 ಆಗಿರುತ್ತದೆ. |
| 2022 | – | – | – | – |
| 2023 | 1 | 1 | – | ಆರ್.ಆರ್ ನಗರ ಪೊಲೀಸ್ ಠಾಣೆ ಮೊ.ಸಂ. 486/2023 ಕಲಂ. 370(4), 34 ಐಪಿಸಿ ಮತ್ತು ಕಲಂ. 80, 81 Juvenile Justice (Care and Protection of Children) Act, 2015 ಪ್ರಕರಣವನ್ನು ದಿನಾಂಕ:30–11–2023 ರಂದು ಸಿಐಡಿ ಘಟಕಕ್ಕೆ ವರ್ಗಾವಣೆ ನೀಡಿದ್ದು, ಮಗು ಪತ್ತೆಯಾಗಿರುತ್ತದೆ ಹಾಗೂ ಪ್ರಕರಣವು ಪ್ರಸ್ತುತ ತನಿಖಾ ಹಂತದಲ್ಲಿರುತ್ತದೆ. |
| 2024 | 1 | 1 | – | ಕೆ.ಜಿ.ಹಳ್ಳಿ ಪೊಲೀಸ್ ಠಾಣೆ ಮೊಸಂ:82/2024 ಕಲಂ IPC 1860 (U/s-370(4)); Juvenile Justice (Care and Protection of Children) Act, 2015 (U/s-80,81) ರೀತ್ಯ ಪ್ರಕರಣ ದಾಖಲು ಮಾಡಲಾಗಿದ್ದು, ಮಗು ಪತ್ತೆಯಾಗಿರುತ್ತದೆ ಹಾಗೂ ಸದರಿ ಪ್ರಕರಣವು ತನಿಖಾ ಹಂತದಲ್ಲಿರುತ್ತದೆ. |

- ಬೆಂಗಳೂರು ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಅಕ್ರಮ ಮಕ್ಕಳ ಮಾರಾಟದ ಪ್ರಕರಣಗಳು

| ಮಕ್ಕಳ ಅಕ್ರಮ ಮಾರಾಟ ಪ್ರಕರಣಗಳ ವಿವರ. | | | | |
|---|---|---|---|---|
| ವರ್ಷ | ದಾಖಲಾದ ಪ್ರಕರಣಗಳ ಸಂಖ್ಯೆ | ಪತ್ತೆ ಹಚ್ಚಲಾದ ಪ್ರಕರಣಗಳ ಸಂಖ್ಯೆ | ಬಾಕಿ ಇರುವ ಪ್ರಕರಣಗಳ ಸಂಖ್ಯೆ | ಬಾಕಿ ಇರುವ ಪ್ರಕರಣಗಳ ತನಿಖೆ ಯಾವ ಹಂತದಲ್ಲಿದೆ |
| 2021 | 01 ಆನೇಕಲ್ ಪೊಲೀಸ್ ಠಾಣೆ ಮೊ.ನಂ. 192/2021 ಕಲಂ. 81. ಜೆ.ಜೆ.ಆಕ್ಟ್ | – | 01 | ಆರೋಪಿಗಳನ್ನು ದಸ್ತಗಿರಿ ಮಾಡಬೇಕು ಮತ್ತು ಸಾಕ್ಷಿದಾರರ ಹೇಳಿಕೆ ಪಡೆಯಬೇಕು. |
| 2022 | 01 ವಿಜಯಪುರ ಪೊಲೀಸ್ ಠಾಣೆ ಮೊ.ನಂ. 09/2022. ಕಲಂ. 81. ಜೆ.ಜೆ.ಆಕ್ಟ್ | 01 | – | ದಿನಾಂಕ: 16/12/2023 ರಂದು ಮಾನ್ಯ ನ್ಯಾಯಾಲಯಕ್ಕೆ ಬಿ ಅಂತಿಮ ವರದಿಯನ್ನು ಸಲ್ಲಿಸಿಕೊಂಡಿರುತ್ತೆ. |
| 2023 | 01 ಮಾದನಾಯಕನಹಳ್ಳಿ ಪೊಲೀಸ್ ಠಾಣೆ ಮೊ.ನಂ. 830/2023 ಕಲಂ.81. ಜೆ.ಜೆ.ಆಕ್ಟ್ | 0 | 01 | ತನಿಖೆ ಪೂರ್ಣಗೊಂಡಿದ್ದು, ದೋಷಾರೋಪಣಾ ಪಟ್ಟಿಯನ್ನು ತಯಾರು ಮಾಡಬೇಕಾಗಿರುತ್ತೆ |